A9.

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ರವಿಕುಮಾರ್ ಎನ್ ರವರು ಶೂನ್ಯ ವೇಳೆಯಲ್ಲಿ ಮಂಡಿಸಿರುವ ಪ್ರಶ್ನೆಗೆ ಉತ್ತರ.

**ಪ್ರಶ್ನೆ:** ರಾಯಚೂರು ಜಿಲ್ಲೆಯ ಸಾವಿರಾರು ಜನರು ಅಧಿಕ ಬಡ್ಡಿಯ ಆಸೆಗೆ ಕೋಟ್ಯಾಂತರ ರೂಪಾಯಿ ಹೂಡಿಕೆ ಮಾಡಿ ವಂಚನೆಗೊಳಗಾದ ಪ್ರಕರಣ ಬೆಳಕಿಗೆ ಬಂದಿದೆ. "ದರ್ವೇಶ್ ಗ್ರೂಪ್ ಆಫ್ ಕಂಪನಿ" ಎಂಬ ಸಂಸ್ಥೆ ಹೂಡಿಕೆದಾರರಿಗೆ ಅಧಿಕ ಬಡ್ಡಿ ನೀಡುವುದಾಗಿ ಹೇಳಿ ಅವರಿಂದ ಡಿಪಾಸಿಟ್ ರೂಪದಲ್ಲಿ ಹಣ ಪಡೆದು ಆರಂಭದಲ್ಲಿ ಅಧಿಕ ಬಡ್ಡಿ ಹಣ ನೀಡಿ ನಂತರ ಬಡ್ಡಿ ಹಣ ನೀಡದೇ ಇರುವುದರಿಂದ ರಾಯಚೂರು ಜಿಲ್ಲೆಯ ಸಾವಿರಾರು ಜನ ಆತಂಕಗೊಂಡಿದ್ದಾರೆ.

ಒಂದು ಲಕ್ಷ ರೂಪಾಯಿ ಠೇವಣಿ ಇಟ್ಟರೆ ಪ್ರತಿ ತಿಂಗಳು ರೂ.10,000 ನೀಡುವುದಾಗಿ ಹೇಳಿ ಠೇವಣಿ ಪಡೆದಿದ್ದ ದರ್ವೇಶ್ ಗ್ರೂಪ್ ಆಫ್ ಕಂಪನಿ ಮಾಲೀಕರು ಹಾಗೂ ಕಂಪನಿಯ ಏಜೆಂಟರು ಆರಂಭದ ಕೆಲ ತಿಂಗಳ ಕಾಲ ಪ್ರತೀ ತಿಂಗಳು ರೂ.10,000 ಬಡ್ಡಿ ಹಣ ನೀಡಿದ ಕಾರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಲಕ್ಷಾಂತರ ಜನರು ಹಣ ಹೂಡಿಕೆ ಮಾಡಿದ್ದು, ಈಗ ಹೆಚ್ಚಿನ ಬಡ್ಡಿ ಹಣ ನೀಡದ ಕಾರಣ ಹೂಡಿಕೆದಾರರು ಕಂಗಾಲಾಗಿದ್ದಾರೆ. ಇದು ಇನ್ನೊಂದು ರೀತಿಯ ಐಎಂಎ ಹಗರಣವಾಗಿದೆ.

ಹೆಚ್ಚಿನ ಬಡ್ಡಿ ದರ ನೀಡಿ ಆರಂಭದ ದಿನಗಳಲ್ಲಿ ಆಸೆ ತೋರಿಸಿದ ಕಾರಣ ಕೆಲ ಬಡವರು, ಕಾರ್ಮಿಕರು ಮತ್ತು ಕೆಲ ಶ್ರೀಮಂತರು ಸಹ ಹಣ ಹೂಡಿಕೆ ಮಾಡಿರುತ್ತಾರೆ. ಸಾವಿರಾರು ಕೋಟಿ ಮೌಲ್ಯದ ವಹಿವಾಟು ಜರುಗಿದ್ದು, ಹಣಕಾಸಿನ ಹೂಡಿಕೆದಾರರು ಆತಂಕಕ್ಕೆ ಒಳಗಾದ ಕಾರಣ ಅವರ ರಕ್ಷಣೆಗೆ ರಾಜ್ಯ ಸರ್ಕಾರ ಕೂಡಲೇ ಅಗತ್ಯ ಕ್ರಮ ಕೈಗೊಂಡು ರಾಜ್ಯದ ಬಡ ಜನರ ಹಿತ ರಕ್ಷಣೆ ಮಾಡುವಂತೆ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:** "ದರ್ವೇಶ್ ಗ್ರೂಪ್ ಆಫ್ ಕಂಪನಿ"ಯ ಪಾಲುದಾರರಾದ 1) ಶ್ರೀ ಮೊಹಮ್ಮದ್ ಹುಸೇನ್ ಸುಜಾ ತಂದೆ ಮೊಹಮ್ಮದ್ ಖಾಸೀಂ, #12-6-1072, ಚಂದ್ರಬಂಡ ರಸ್ತೆ, ಹುಂಡೇಕರ್ ಕಾಲೋನಿ, ರಾಯಚೂರು, 2) ಶ್ರೀ ಸೈಯದ್ ವಸೀಂ ತಂದೆ ಮೆಹಬೂಬ್ ಅಲಿ, #9-11-21, ವಾಟರ್ ಟ್ಯಾಂಕ್ ಹತ್ತಿರ, ಮಡ್ಡಿಪೇಟೆ, ರಾಯಚೂರು, 3) ಶ್ರೀ ಸೈಯದ್ ಮಿಸ್ಕಿನ್ ತಂದೆ ಸೈಯದ್ ಅಲಿ, #9-11-21/1, ಗದ್ವಾಲ್ ರಸ್ತೆ, ಮಡ್ಡಿಪೇಟೆ, ರಾಯಚೂರು ರವರುಗಳು ದರ್ವೇಶ್ ಗ್ರೂಪ್‌ನ ದಿನಾಂಕ: 07.11.2022 ರಂದು ರಾಯಚೂರಿನ ನೋಂದಣಿ ಕಾರ್ಯಾಲಯದಲ್ಲಿ ಸಂಖ್ಯೆ: FIR-RCR-F61-2022-23 ಪ್ರಕಾರ ನೋಂದಣಿ ಮಾಡಿಸಿದ್ದು, ಪ್ರಸ್ತುತ ಸದರಿ ಗ್ರೂಪ್‌ನ ಕಾರ್ಯಾಲಯವು ರಾಯಚೂರು ನಗರದ ಹೈದ್ರಾಬಾದ್ ರಸ್ತೆಯ ರಿಮ್ಸ್ ಆಸ್ಪತ್ರೆಯ ಗೇಟ್ ಮುಂದುಗಡೆ ಇರುವ #MRL ಆವರಣದಲ್ಲಿಯ ಕಾಂಪ್ಲೆಕ್ಸ್ ನಂ. 5,6,7,8 ಮತ್ತು 9 ರಲ್ಲಿ ಕಾರ್ಯನಿರ್ವಹಿಸುತ್ತಿದೆ.

ದರ್ವೇಶ್ ಗ್ರೂಪ್‌ನ ಪಾಲುದಾರರಾದ ಶ್ರೀ ಮೊಹಮದ್ ಹುಸೇನ್ ಸುಜಾ ತಂದೆ ಮೊಹಮದ್ ಖಾಸೀಂ ಇವರ ಹೆಸರಿನಲ್ಲಿ ಸಿರವಾರ ತಾಲ್ಲೂಕಿನ ಕಲ್ಲೂರು ಗ್ರಾಮ ಸೀಮಾಂತರದಲ್ಲಿ ವಿವಿಧ ಸರ್ವೇ ನಂಬರ್‌ಗಳಲ್ಲಿ 55.24 ಎಕರೆ ಜಮೀನು ಹಾಗೂ ರಾಯಚೂರು ತಾಲ್ಲೂಕಿನ ಪೋತಗಲ್ ಸೀಮಾಂತರದಲ್ಲಿ ವಿವಿಧ ಸರ್ವೇ ನಂಬರ್‌ಗಳಲ್ಲಿ 06 ಎಕರೆ ಜಮೀನು ಹೊಂದಿರುತ್ತಾರೆ.

ದರ್ವೇಶ್ ಗ್ರೂಪ್ ಪಾಲುದಾರರು ಪ್ರಸ್ತುತ ರಿಯಲ್ ಎಸ್ಟೇಟ್ ವ್ಯವಹಾರ ಮತ್ತು ಲೇಔಟ್‌ಗಳ ಅಭಿವೃದ್ಧಿ ಮತ್ತು ಸ್ವಂತ ಕಟ್ಟಡಗಳನ್ನು ನಿರ್ಮಿಸಿ ಮಾರಾಟ ಮಾಡುವ ವ್ಯವಹಾರಗಳಲ್ಲಿ ತೊಡಗಿದ್ದು, ಸದರಿ ವ್ಯವಹಾರಗಳ ದೃಷ್ಟಿಯಿಂದ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸಿ ತಮ್ಮ ವ್ಯವಹಾರದ ವಿಸ್ತರಣೆಗಾಗಿ ಕಾರ್ಯಚಟುವಟಿಕೆ ನಡೆಸುತ್ತಿದ್ದು, ಸಾರ್ವಜನಿಕರಿಂದ ಈ ಕೆಳಕಂಡ ಮಾರ್ಗಗಳಲ್ಲಿ ಹಣವನ್ನು ಸಂಗ್ರಹಣೆ ಮಾಡುತ್ತಿದ್ದಾರೆ.

**ಮೊದಲ ವಿಧ:** ಈ ಕಂಪನಿಯಲ್ಲಿ ಹಣವನ್ನು ಹೂಡಿಕೆ ಮಾಡಿದ ಸಾರ್ವಜನಿಕರಿಗೆ ಖರೀದಿಯ ಪರವಾಗಿ ನೋಂದಾಯಿತ ಮಾರಾಟ ಒಪ್ಪಂದವನ್ನು ಮಾಡಿಕೊಳ್ಳುವುದು.

**ಎರಡನೇ ವಿಧ:** ಈ ಕಂಪನಿಯಲ್ಲಿ ಹೂಡಿಕೆ ಮಾಡಿದ ಸಾರ್ವಜನಿಕರಿಗೆ ಮಾಸಿಕ ಪ್ರತಿಶತ 2% ಆದಾಯವನ್ನು ನೀಡುತ್ತಾ ಬಂದಿರುವುದು.

ಸದರಿ ದರ್ವೇಶ್ ಗ್ರೂಪ್ ಸಾರ್ವಜನಿಕರಿಂದ ಹಣ ಸಂಗ್ರಹಣೆ ಮಾಡಿ ಈ ಕೆಳಕಂಡ ಪ್ರಕಾರ ರಿಯಲ್ ಎಸ್ಟೇಟ್ ಮತ್ತು ಇತರೆ ಪ್ರಾಯೋಜನಿಕ ಯೋಜನೆಗಳನ್ನು ಕೈಗೊಂಡಿರುವುದಾಗಿ ತಿಳಿದು ಬಂದಿರುತ್ತದೆ.

**1) ದರ್ವೇಶ್ ಹೈಟ್ಸ್**

ರಾಯಚೂರು ನಗರದ LBS ನಗರದ ಪೋತಗಲ್ ರಸ್ತೆ ಹತ್ತಿರ R.K ಗಾರ್ಡನ್ ಹಿಂದೆ ಸೋಂಗಾ ನಾಯಕ್ ಲೇಔಟ್‌ನಲ್ಲಿ 2 ಬಿ.ಹೆಚ್.ಕೆ ಮನೆಗಳನ್ನು ನಿರ್ಮಿಸಿ ಜನಸಾಮಾನ್ಯರಿಗೆ ರೂ.16.00 ಲಕ್ಷಗಳಿಗೆ ಮಾರಾಟ ಮಾಡುವುದು.

**2) ದರ್ವೇಶ್ ಟೌನ್**

ರಾಯಚೂರು ತಾಲ್ಲೂಕಿನ ಪೋತಗಲ್ ರಸ್ತೆ ಸರ್ವೆ ನಂ. 136/*/07, 136/*/09, 136/*/10 ರಲ್ಲಿ ಒಟ್ಟು 4 ಎಕರೆ ಜಮೀನಿನಲ್ಲಿ ವಿಲ್ಲಾಗಳನ್ನು ನಿರ್ಮಿಸಲಾಗುವುದು.

**3) ಆರ್ಕಿಡ್ ಬ್ಲೂ ಲೇಔಟ್ ಪ್ಲಾಟ್‌ಗಳನ್ನು ನಿರ್ಮಿಸುವ ಯೋಜನೆ**

ರಾಯಚೂರು ತಾಲ್ಲೂಕಿನ ಪೋತಗಲ್ ರಸ್ತೆ ಸರ್ವೆ ನಂ. 137/*/4, 137/*/05 ರಲ್ಲಿ ಒಟ್ಟು 2 ಎಕರೆ ಜಮೀನು ಹೊಂದಿರುವುದಾಗಿ ತಿಳಿಸುತ್ತಿದ್ದಾರೆ.

ದರ್ವೇಶ್ ಗ್ರೂಪ್ ಸಾರ್ವಜನಿಕರಿಗೆ ಹೂಡಿಕೆ ರೂಪದಲ್ಲಿ ರೂ.1.00ಲಕ್ಷಗಳನ್ನು ಸಂಗ್ರಹಿಸಿ ಮಾಸಿಕವಾಗಿ ಆಕರ್ಷಕ 10% ಬಡ್ಡಿಯ ಹಣವನ್ನು ನೀಡುತ್ತಿರುವುದಾಗಿ ತಿಳಿದುಬಂದಿದ್ದು, ಈ ಎಲ್ಲಾ ವಹಿವಾಟು ನಗದು ರೂಪದಲ್ಲಿಯೇ ನಡೆಯುತ್ತಿರುವುದಾಗಿ ತಿಳಿದು ಬಂದಿರುತ್ತದೆ.

ಸದರಿ ಕಂಪನಿ ಹೆಸರಿನಲ್ಲಿ ಹಣ ಹೂಡಿಕೆ ಮಾಡಿದರೆ ನಿಮ್ಮ ಹಣವನ್ನು ಬೇರೆ ಕಂಪನಿಗಳಿಗೆ ಹೂಡಿಕೆ ಮಾಡಿ, ಅವುಗಳಿಂದ ಬಂದ ಹಣದಲ್ಲಿ ಹೆಚ್ಚಿನ ಲಾಭಾಂಶದಲ್ಲಿ ಹೆಚ್ಚಿನ ಭಾಗದ ಹಣ/ಬಡ್ಡಿಯನ್ನು ನೀಡುವುದಾಗಿ ಹೇಳಿಕೊಂಡು ರಾಯಚೂರು ನಗರದ ಹಾಗೂ ಸುತ್ತ ಮುತ್ತಲಿನ ಗ್ರಾಮದ, ಅಕ್ಕ ಪಕ್ಕದ ಜಿಲ್ಲೆಯ ಜನರು ಹಣವನ್ನು ಹೂಡಿಕೆ ಮಾಡಿಕೊಂಡಿದ್ದು, ಅದಕ್ಕೆ ದರ್ವೇಶ್ ಗ್ರೂಪ್ ನವರು ತಮ್ಮ ದರ್ವೇಶ್ ಗ್ರೂಪ್‌ನ ಹೆಸರಿರುವ ಕರಾರು ಪತ್ರಗಳನ್ನು ಬರೆದು ಕೊಟ್ಟಿರುವುದಾಗಿ ತಿಳಿದು ಬಂದಿರುತ್ತದೆ.

ಕೆಲ ದಿನಗಳಿಂದ ಯಾವುದೇ ರೀತಿಯ ಲಾಭಾಂಶ/ಬಡ್ಡಿಯನ್ನು ಹೂಡಿಕೆದಾರರಿಗೆ ಕೊಡದೆ ಹಾಗೂ ತಾವು ತೆರೆದಂತಹ ಕಛೇರಿಯಲ್ಲಿ ತಾರನಾಥ ಎಂಬ ಕಾನೂನು ಸಲಹೆಗಾರರನ್ನು ಹೊರತುಪಡಿಸಿ, ಬೇರೆ ಯಾರು ಸಹ ಕಛೇರಿಯಲ್ಲಿ ಇರದೆ, ಊರಲ್ಲಿ ಸಹ ಇರದೆ ಇದ್ದುದ್ದರಿಂದ, ತಾವು ಹೂಡಿದ ಹಣ ಕೊಡದೆ ಎಲ್ಲೋ ಹೋಗಿರುತ್ತಾರೆಂದು ಭಾವಿಸಿ ಹೂಡಿಕೆದಾರರು ಆಕ್ರೋಶಗೊಂಡು ದಿನಾಂಕ:22.07.2024 ರಂದು ಕಛೇರಿಯ ಒಳಗಡೆ ನುಗ್ಗಿ ಕೆಲವು ವಸ್ತುಗಳನ್ನು ನಾಶಪಡಿಸಿರುವುದು ಕಂಡು ಬಂದಿರುವ ಹಿನ್ನಲೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರು, ಹೆಚ್ಚುವರಿ ಪೊಲೀಸ್ ಅಧೀಕ್ಷಕರು 1 ಮತ್ತು 2 ರವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಸದ್ಯ ಪರಿಸ್ಥಿತಿಯು ಶಾಂತವಿದ್ದು ಮುಂದಿನ ಚಟುವಟಿಕೆಗಳ ಮೇಲೆ ನಿಗಾ ಇರಿಸಲಾಗಿದೆ.

ಹಣ ಪಡೆದು ಮೋಸ ಮಾಡಿದ "ದರ್ವೇಶ್ ಗ್ರೂಪ್ ಆಫ್ ಕಂಪನಿ"ಯ ವಿರುದ್ಧ ಶ್ರೀ ಚಂದ್ರು ತಂದೆ ಬಾಬು ಸಾ|| ಸಗಮಕುಂಟ ಎಂಬುವವರು ನೀಡಿದ ದೂರಿನ ಆಧಾರದ ಮೇಲೆ ರಾಯಚೂರು ಸಿಇಎನ್ ಪೊಲೀಸ್ ಠಾಣೆಯಲ್ಲಿ ಮೊ.ಸಂ : 08/2024 ಕಲಂ 21(1, 2, 3) BUDS Act-2019 & ಕಲಂ-406, 420 ಸಹಿತ 34 ಐಪಿಸಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆಯನ್ನು ಚುರುಕುಗೊಳಿಸಲಾಗಿರುತ್ತದೆ.

ಸಂಖ್ಯೆ: ಹೆಚ್‌ಡಿ 52 ಎಸ್‌ಡಿಎನ್ 2024

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು